**ದಿನಾಂಕ:; 18.6.2020 ರಂದು ಪೂರ್ವಾಹ್ನ 11.30 ಗಂಟೆಗೆ ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಎಂಪಿಕ್ ಸಭೆಯ ನಡವಳಿಗಳು.**

ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳನ್ನು ಕಾರ್ಯದರ್ಶಿಯವರು ಸ್ವಾಗತಿಸಿದರು.

ಮೇ 2020ರ ತಿಂಗಳ ಎಂಪಿಕ್ ಸಭೆಯ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮಗಳ ಬಗ್ಗೆ ಪರಿಶೀಲಿಸಲಾಯಿತು.

1. 2019-2020ನೇ ಸಾಲಿನ ವರ್ಷದಡಿಯಲ್ಲಿ ಈ ಇಲಾಖೆಗೆ ಒದಗಿಸಲಾಗಿದ್ದ ಅನುದಾನದಲ್ಲಿ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರಕ್ಕೆ ಮೌಲ್ಯಮಾಪನಕ್ಕಾಗಿ 10 ಸಾರ್ವಜನಿಕ ಉದ್ದಿಮೆಗಳನ್ನು ಆಯ್ಕೆ ಮಾಡಿ ಸರ್ಕಾರಿ ಆದೇಶವನ್ನು ದಿನಾಂಕ 25.02.2020ರಂದು ಹೊರಡಿಸಲಾಗಿದ್ದು, ಈ ಸರ್ಕಾರಿ ಆದೇಶದಂತೆ ನಿಗದಿಪಡಿಸಿರುವ ಷರತ್ತುಗಳ ಅನುಪಾಲನೆಯ ಬಗ್ಗೆ ಉಪಸ್ಥಿತರಿದ್ದ ಅಧಿಕಾರಿಗಳನ್ನು ವಿಚಾರಿಸಲಾಯಿತು. ಈ ವಿಷಯದ ಬಗ್ಗೆ ಮುಖ್ಯ ಮೌಲ್ಯಮಾಪನ ಅಧಿಕಾರಿ, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ ಇವರಿಂದ ದಿನಾಂಕ: 25.02.2020 ರಂದು ಪತ್ರ ಬಂದಿದ್ದು, 10 ಸಾರ್ವಜನಿಕ ಉದ್ದಿಮೆಗಳ ಅಧ್ಯಯನಗಳನ್ನು ತೆಗೆದುಕೊಳ್ಳಲು ಆರ್ಥಿಕ ಇಲಾಖೆಯ ಅನುಮತಿ ಪಡೆಯಬೇಕಾಗಿರುವುದರಿಂದ ಆರ್ಥಿಕ ಇಲಾಖೆಗೆ ಪತ್ರ ಬರೆಯಲಾಗಿದೆಯೆಂದು ಅವರು ತಿಳಿಸಿರುವ ಬಗ್ಗೆ ಉಪಸ್ಥಿತರಿದ್ದ ಅಧಿಕಾರಿಗಳು ತಿಳಿಸಿದರು. ಕೂಡಲೇ ವಸ್ತು ಸ್ಥಿತಿ ವಿವರಣೆ ನೀಡಲು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರಕ್ಕೆ ಕರಡು ಪತ್ರ ಮಂಡಿಸಲು ಸೂಚಿಸಲಾಯಿತು ಮತ್ತು ದಿನಾಂಕ: 25.02.2020 ರಂದು ಹೊರಡಿಸಲಾಗಿರುವ ಸರ್ಕಾರಿ ಆದೇಶದ ಅನುಪಾಲನೆ ಬಗ್ಗೆ ಪ್ರತಿ ತಿಂಗಳು ವರದಿ ನೀಡಲು ಮುಖ್ಯ ಮೌಲ್ಯಮಾಪನ ಅಧಿಕಾರ, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ ಇವರಿಗೆ ತಿಳಿಸಬೇಕೆಂದು ಸೂಚಿಸಲಾಯಿತು.

(ಕ್ರಮ:ಉಪ ಕಾರ್ಯದರ್ಶಿ/ಅಧೀನ ಕಾರ್ಯದರ್ಶಿ)

2. ಕರ್ನಾಟಕ ರಾಜ್ಯ ವಾರ್ಷಿಕ ರತ್ನ ಪ್ರಶಸ್ತಿ ಕಾರ್ಯಕ್ರಮವನ್ನು ನಡೆಸಲು ದಿನಾಂಕ: 06.03.2020 ರಂದು ಆದೇಶ ಹೊರಡಿಸಲಾಗಿದ್ದು,, ತದನಂತರ ವಾರ್ಷಿಕ ರತ್ನ ಪ್ರಶಸ್ತಿಯ ಕಾರ್ಯಕ್ರಮವನ್ನು ನಡೆಸಲಾಗದಿರುವ ಕಾರಣ, ಅದರಡಿಯಲ್ಲಿ ಕರ್ನಾಟಕ ರಾಜ್ಯ ಮಿನರಲ್ಸ್ ಸಂಸ್ಥೆಗೆ ಬಿಡುಗಡೆಯಾದ ರೂ. 10.00 ಲಕ್ಷ ಹಣವನ್ನು ಮರು ಪಾವತಿ ಮಾಡಲು ಸೂಚಿಸಲಾಯಿತು. ಆದರೆ ಕರ್ನಾಟಕ ರಾಜ್ಯ ಮಿನರಲ್ಸ್ ಸಂಸ್ಥೆಯು ಬಿಡುಗಡೆಯಾದ ಅನುದಾನವನ್ನು ಸಂದಾಯ ಮಾಡಲು ಖಜಾನೆಯಲ್ಲಿ ತಾಂತ್ರಿಕ ತೊಂದರೆಯಾದ ಕಾರಣ ಕಡತವನ್ನು ಅಭಿಪ್ರಾಯಕ್ಕಾಗಿ ದಿನಾಂಕ: 01.06.2020 ರಂದು ಆರ್ಥಿಕ ಇಲಾಖೆಗೆ ಕಳುಹಿಸಲಾಗಿದೆ. ಸದರಿ ಕಡತವನ್ನು ಹಿಂಬಾಲಿಸಲು ಇಲಾಖೆಯ ಅಧಿಕಾರಿಗಳಿಗೆ ಸೂಚಿಸಲಾಯಿತು ಹಾಗೂ ಆರ್ಥಿಕ ಇಲಾಖೆಯ ಅಭಿಪ್ರಾಯ ಬಂದ ಕೂಡಲೇ ಸರ್ಕಾರಿ ಆದೇಶವನ್ನು ಸೂಕ್ತ ತಿದ್ದುಪಡಿ ಮಾಡಿ ಕರ್ನಾಟಕ ರಾಜ್ಯ ಮಿನರಲ್ಸ್ ಸಂಸ್ಥೆಯಿಂದ ರೂ. 10.00 ಲಕ್ಷ ಹಣವನ್ನು ಸಂದಾಯ ಮಾಡಲು ಕ್ರಮ ತೆಗೆದುಗೊಳ್ಳಬೇಕೆಂದು ಉಪಸ್ಥಿತ ಅಧಿಕಾರಿಗಳಿಗೆ ಸೂಚಿಸಲಾಯಿತು.

ಮುಂದುವರೆದು 2019-20ನೇ ಸಾಲಿನಲ್ಲಿ ಮಾನ್ಯ ಮುಖ್ಯಮಂತ್ರಿಗಳ ವಾರ್ಷಿಕ ರತ್ನ ಪ್ರಶಸ್ತಿ ನೀಡಿರುವ ಎಲ್ಲಾ ಸಾರ್ವಜನಿಕ ಉದ್ದಿಮೆಗಳಿಂದ ಸಂದಾಯವಾದ ರಶೀದಿಯನ್ನು ಪಡೆದಿರುವ ಮಾಹಿತಿಯ ಬಗ್ಗೆ ಕಡತದಲ್ಲಿ ಮಂಡಿಸಲು ಸೂಚಿಸಲಾಯಿತು.

(ಉಪ ಕಾರ್ಯದರ್ಶಿ ಮತ್ತು ಅಧೀನ ಕಾರ್ಯದರ್ಶಿ)

3. ಈ ವರ್ಷದ 2020-2021ನೇ ಸಾಲಿನಲ್ಲಿ ಸಾರ್ವಜನಿಕ ಉದ್ದಿಮೆಗಳ ಇಲಾಖೆಗೆ ಅನುದಾನದ ವಿವರಗಳ ಬಗ್ಗೆ ಹಾಗೂ ಮುಂದ್ಗುವರೆದ ಯೋಜನೆಗಳ ಬಗ್ಗೆ ಕಡತದಲ್ಲಿ ಆರ್ಥಿಕ ಇಲಾಖೆಯ ಅಭಿಪ್ರಾಯವನ್ನು ಕೋರಲಾಗಿದ್ದು, ಆರ್ಥಿಕ ಇಲಾಖೆಯಿಂದ ಇದುವರೆವಿಗೂ ಕಡತ ಬಂದಿರುವುದಿಲ್ಲ. ಆರ್ಥಿಕ ಇಲಾಖೆಯಿಂದ ಅಭಿಪ್ರಾಯ ಬರದಿರುವ ಕಾರಣ ಇಲಾಖೆಯ 2020-21ನೇ ಯೋಜನೆಗಳ ಬಗ್ಗೆ ಯಾವುದೇ ಕ್ರಮ ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ.

4. ಇ-ಆಫೀಸ್ ನಲ್ಲಿ 70 ಕಡತಗಳು ಹಾಗೂ ಎಫ್ಎಂಎಸ್ ನಲ್ಲಿ 11 ಕಡತಗಳು ಬಾಕಿ ಇರುವುದೆಂದು ಉಪಸ್ಥಿತರಿದ್ದ ಅಧಿಕಾರಿಗಳು ತಿಳಿಸಿದರು. ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಅಧಿಕಾರಿಗಳಿಗೆ ಸೂಚಿಸಲಾಯಿತು. ಅಲ್ಲದೆ ಸಚಿವಾಲಯ ವಾಹಿನಿಯಲ್ಲಿ 30 ದಿನಗಳಿಗಿಂತಲೂ ಹೆಚ್ಚು ಚಾಲನೆಯಲ್ಲಿ ಇಲ್ಲದಿರುವ ಕಡತಗಳನ್ನು ನಿಯಮಾನುಸಾರ ಪರಿಶೀಲಿಸಲು ಸೂಚಿಸಲಾಯಿತು.

(ಉಪ ಕಾರ್ಯದರ್ಶಿ ಮತ್ತು ಅಧೀನ ಕಾರ್ಯದರ್ಶಿ)

Rashmi V.

( ವಿ. ರಶ್ಮಿ ಮಹೇಶ್)
ಸರ್ಕಾರದ ಕಾರ್ಯದರ್ಶಿ,
ಸಾರ್ವಜನಿಕ ಉದ್ದಿಮೆಗಳ ಇಲಾಖೆ.

ಸಂಖ್ಯೆ: ಸಾಉಇ 06 ಎಆರ್‌ಯು 2020

ಇವರಿಗೆ: ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ

1) ಸರ್ಕಾರದ ಉಪ ಕಾರ್ಯದರ್ಶಿ(ಬಿಮತ್ತುಆರ್), ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
2) ನಿರ್ದೇಶಕರು,(ಪಿಎಫ್), ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
3) ಸರ್ಕಾರದ ಉಪ ಕಾರ್ಯದರ್ಶಿ, ಸಾರ್ವಜನಿಕ ಉದ್ದಿಮೆಗಳ ಇಲಾಖೆ.
4) ಸರ್ಕಾರದ ಅಧೀನ ಕಾರ್ಯದರ್ಶಿ,(ಆಡಳಿತ/ತಾಂತ್ರಿಕ), ಸಾರ್ವಜನಿಕ ಉದ್ದಿಮೆಗಳ ಇಲಾಖೆ.
5) ಶಾಖಾಖ ರಕ್ಷಾ ಕಡತ/ಹೆಚ್ಚುವರಿ ಪ್ರತಿ.